**ವಿಷಯ ಸಂಕೇತ : 01K**

## 2024 – 25 ನೇ ಸಾಲಿನ ಎಸ್.ಎಸ್.ಎಲ್.ಸಿ. ಸಂಕಲನಾತ್ಮಕ ಮೌಲ್ಯಮಾಪನ - 1

# ಪ್ರಥಮ ಭಾಷೆ ಕನ್ನಡ

ಸಮಯ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.15 ರವರೆಗೆ] [ಗರಿಷ್ಠ ಅಂಕಗಳು : 100

***ಸೂಚನೆಗಳು :*** *1) ಈ ಪ್ರಶ್ನೆಪತ್ರಿಕೆಯು ಒಟ್ಟು **45** ಪ್ರಶ್ನೆಗಳನ್ನು ಹೊಂದಿದೆ.*

*2) ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.*

*3) ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.*

*4) ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು **15** ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.*

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** **6×1=6**

1) 'ಉನ್ಮಾದ' ಪದವು ಈ ಸಂಧಿಗೆ ಉದಾಹರಣೆಯಾಗಿದೆ
   ಎ) ಆದೇಶಸಂಧಿ   ಬಿ) ಲೋಪಸಂಧಿ   ಸಿ) ಅನುನಾಸಿಕ ಸಂಧಿ   ಡಿ) ಜಶ್ತ್ವ ಸಂಧಿ

2) ಸಾಮಾನ್ಯಾರ್ಥಕಾವ್ಯಯಕ್ಕೆ ಉದಾಹರಣೆಯಾದ ಪದವಿದು
   ಎ) ಧಗಧಗ   ಬಿ) ಸುಮ್ಮನೆ   ಸಿ) ಉಂಟು   ಡಿ) ಅಥವಾ

3) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು
   ಎ) ವಾಕ್ಯವೇಷ್ಟನ   ಬಿ) ಉದ್ಧರಣ   ಸಿ) ಆವರಣ   ಡಿ) ವಿವರಣಾತ್ಮಕ

4) 'ಕೈಯಾನು' ಪದವು ಈ ಸಮಾಸಕ್ಕೆ ಸೇರಿದೆ
   ಎ) ಕ್ರಿಯಾ ಸಮಾಸ   ಬಿ) ತತ್ಪುರುಷ ಸಮಾಸ   ಸಿ) ಅಂಶಿ ಸಮಾಸ   ಡಿ) ದ್ವಿಗು ಸಮಾಸ

5) ಸಂಭಾವನಾರ್ಥಕ ಕ್ರಿಯಾಪದಕ್ಕೆ ಉದಾಹರಣೆಯಾದ ಪದವಿದು
   ಎ) ಮಾಡಲಿ   ಬಿ) ಮಾಡನು   ಸಿ) ಮಾಡಿದನು   ಡಿ) ಮಾಡಿಯಾನು

6) ಸಂಪ್ರದಾನ ಕಾರಕಾರ್ಥವು ಈ ವಿಭಕ್ತಿಯದ್ದಾಗಿದೆ
   ಎ) ಸಪ್ತಮೀ   ಬಿ) ಪಂಚಮೀ   ಸಿ) ಚತುರ್ಥೀ   ಡಿ) ತೃತೀಯಾ

II. **ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4×1=4**

7) ಪಾದುಕಾ : ಹಾವುಗೆ :: ವೈಶಾಖ : ____________

8) ತುತ್ತತುದಿ : ದ್ವಿರುಕ್ತಿ :: ಸತಿಪತಿ : ____________

9) ಸಹದೇವ : ಅಂಕಿತನಾಮ :: ಪರ್ವತ : ____________

10) ಅವರ್ಗೀಯ ವ್ಯಂಜನಗಳು : ೯ :: ಅನುನಾಸಿಕಗಳು : ____________

**ಪು.ತಿ.ನೋ.**

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7×1=7**

11) ಭಾಷೆ ಯಾವುದಕ್ಕೆ ಸಾಧನವಾಗಿದೆ ?

12) ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು ?

13) ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ ?

14) 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಯಾರು ?

15) ಹಕ್ಕಿಯ ಕಣ್ಣುಗಳು ಯಾವುವು ?

16) ಹಕ್ಕಿ ಯಾರನ್ನು ಹರಸಿದೆ ?

17) ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು ಹೇಗೆ ನಿಂತಿವೆ ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10×2=20**

18) ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳೇನು ?

19) ಕನ್ನಡ ಭಾಷೆ ಹದಗೊಂಡದ್ದು ಹೇಗೆ ?

20) ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.

21) ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು ?

22) ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ ?

23) ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?

24) ಭಗತ್‌ಸಿಂಗ್, ಜಲಿಯನ್ ವಾಲಾಬಾಗ್‌ನ ಮಣ್ಣಿನ ಕುರಿತು ತನ್ನ ತಂಗಿಗೆ ಏನೆಂದು ಹೇಳುತ್ತಾನೆ ?

25) ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಮಾರಣ ಹೋಮದಿಂದ ತೆಗೆದುಕೊಂಡ ನಿರ್ಧಾರವೇನು ?

26) 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು ?

27) ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ ?

**V. ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** **2×3=6**

28) ಡಿ. ಎಸ್. ಜಯಪ್ಪಗೌಡ

29) ರನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** **1×3=3**

30) ಭಾವಿಸಿದ ಜನಪದಂ ವಸು
ಧಾವಲಯ ವಿಲೀನ ವಿಶದ ವಿಷಯ ವಿಶೇಷಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** **1×3=3**

31) "ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ."

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ :** **1×3=3**

32) ಮಾತೇ ಮುತ್ತು , ಮಾತೇ ಮೃತ್ಯು.

**ಅಥವಾ**

ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6×3=18**

33) "ಜ್ಞಾನ ಭಂಡಾರ ಭದ್ರವಾಯಿತು."

34) "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು."

35) "ನಿನಗೊಂದು ಗುಡಿಮನೆ ಕಟ್ತಾ ಇದ್ದೀವಿ ತಾಯಿ."

36) "ಪ್ರೀತಿಯ ಹಣತೆಯ ಹಚ್ಚೋಣ."

37) "ತಿಂಗಳಿನೂರಿನ ನೀರನು ಹೀರಿ."

38) "ಲಲನೆ ಪಡೆದೀಯೈದು ಮಂತ್ರಂಗಳಲಿ ಮೊದಲಿಗ ನೀನು."

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1×4=4**

39) ಕೊರಳ ಸೆರೆ ಹಿಗ್ಗಿದವು ದೃಗುಜಲ

\- - - - - - - - - - - - - - - - -

\- - - - - - - - - - - - - - - - -

\- - - - - - - - - - - - - - - - -

\- - - - - - - - - - - - - - - - -

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

**ಅಥವಾ**

ಮಾರಿಗೌತಣವಾಯ್ತು ನಾಳಿನ

\- - - - - - - - - - - - - - - - -

\- - - - - - - - - - - - - - - - -

\- - - - - - - - - - - - - - - - -

\- - - - - - - - - - - - - - - - -

ವೀರರೈವರ ನೋಯಿಸೆನು ರಾಜೀವಸಖನಾಣೆ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1×4=4**

40) ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ-ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2×4=8**

41) ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ವಿವರಿಸಿ.

**ಅಥವಾ**

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿನ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳನ್ನು ಕುರಿತು ಬರೆಯಿರಿ.

42) ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1×4=4 (2+2)**

43) ಭಯದ ಮೂಲವಿರುವುದು ಆಕಾಶದ ಯಾವುದೇ ಮೂಲೆಯಲ್ಲಲ್ಲ. ಆಕಾಶದಿಂದ ಬಾಂಬುಗಳು ಉದುರಿದರೂ, ಕಾರ್ಖಾನೆಗಳಲ್ಲಿ ಅವು ತಯಾರಾಗಿದ್ದರೂ, ಮನುಷ್ಯನ ಮನಸ್ಸಿನಲ್ಲಿರುವ ಭಯವೇ ಅದರ ಮೂಲ ಕಾರಣ. ಭಯ ನಮ್ಮನ್ನು ಆವರಿಸಿದಾಗ ಎದೆ ಬಡಿತ ಹೆಚ್ಚುತ್ತದೆ, ಉಸಿರಾಡಲು ಕಷ್ಟವೆನಿಸುತ್ತದೆ, ನಡುಕ ಉಂಟಾಗುತ್ತದೆ, ಮೈ ಬೆವರುತ್ತದೆ. ಭಯ ನಮ್ಮ ವಿಚಾರಶಕ್ತಿಯನ್ನೂ ಮೊಟಕುಗೊಳಿಸುತ್ತದೆ. ದೈಹಿಕವಾಗಿಯೂ, ಮಾನಸಿಕವಾಗಿಯೂ ನಮ್ಮನ್ನು ದುರ್ಬಲಗೊಳಿಸುತ್ತದೆ. ನಮ್ಮ ಆತ್ಮವಿಶ್ವಾಸವನ್ನು ಅಲುಗಾಡಿಸುತ್ತದೆ. ಯಾವುದೇ ಕಾರ್ಯವನ್ನು ಕೈಗೊಂಡು ಅದನ್ನು ಯಶಸ್ವಿಯಾಗಿ ಮುಗಿಸಲು ತಡೆ ಒಡ್ಡುತ್ತದೆ. ಸದ್ಭಾವನೆ, ಪ್ರೀತಿ, ವಿಶ್ವಾಸ, ಸ್ನೇಹ, ಕರುಣೆಗಳನ್ನು ಇಲ್ಲವಾಗಿಸುತ್ತದೆ. ಚಿಂತೆ, ಸಂತೋಷ, ಸಿಟ್ಟು , ಶಾಂತತೆ ಇವು ಹೇಗೆ ಮನಸ್ಸಿನ ಸ್ವಭಾವವೋ, ಹಾಗೆಯೇ ಭಯವೂ ಕೂಡ ಮನಸ್ಸಿನ ಒಂದು ಸ್ವಭಾವವಾಗಿದೆ. ನಿರ್ಭೀತಿಯ ಭಾವನೆಗಳನ್ನು ನಿಯಮಿತ ರೀತಿಯಲ್ಲಿ ಮೆಲುಕಾಡುತ್ತ ; ನಿಯಮಿತ ರೀತಿಯಲ್ಲಿ ಸಾವಕಾಶವಾಗಿ ಅಭ್ಯಾಸ ಮಾಡಿದರೆ ಭಯಪಡುವ ಸ್ವಭಾವವು ಬದಲಾಗುವುದು. ಒಬ್ಬ ನಿರ್ಭೀತಿಯ ಮಹಾವೀರ ತನ್ನ ಬದುಕಿನಲ್ಲಿ ಧೈರ್ಯ; ಪರಾಕ್ರಮ, ಉನ್ನತ ಆದರ್ಶಗಳ ಮೂಲಕ ಜನಾಂಗದ ಭೀತಿಯನ್ನೇ ದೂರ ಮಾಡಬಲ್ಲ. ಸ್ವಾಮಿ ವಿವೇಕಾನಂದರ ಜೀವನದಲ್ಲೂ, ಗಾಂಧೀಜಿಯವರ ಜೀವನದಲ್ಲೂ ನಾವು ಇದನ್ನೇ ಕಾಣುತ್ತೇವೆ.

**ಪ್ರಶ್ನೆಗಳು :**

ಅ) ಭಯದ ಸ್ವಭಾವವನ್ನು ಹೇಗೆ ಬದಲಿಸಿಕೊಳ್ಳಬಹುದು ?

ಆ) ಭಯದಿಂದಾಗುವ ಪರಿಣಾಮಗಳೇನು ?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1×5=5**

44) ನಿಮ್ಮನ್ನು ಹಾಸನದ ನಿವಾಸಿ 'ರಾಕೇಶ' ಎಂದು ಭಾವಿಸಿಕೊಂಡು, ನಿಮ್ಮ ಪ್ರದೇಶದಲ್ಲಿ ಅತಿವೃಷ್ಟಿಯಿಂದಾದ ಅನಾಹುತಗಳಿಗೆ ಪರಿಹಾರ ಕೋರಿ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಬಾಗಲಕೋಟೆಯ ಸರ್ಕಾರಿ ಪ್ರೌಢಶಾಲೆಯ 'ರೂಪಶ್ರೀ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಹಮ್ಮಿಕೊಂಡ 'ಪ್ರತಿಭಾ ಕಾರಂಜಿ' ಕಾರ್ಯಕ್ರಮವನ್ನು ವಿವರಿಸಿ ಧಾರವಾಡದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ಗೌರಿ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1×5=5**

45) ಗ್ರಂಥಾಲಯಗಳ ಮಹತ್ವ.

**ಅಥವಾ**

ಶಾಲೆಯಲ್ಲಿನ ಭಾಷಾ ಸಂಘದ ಕಾರ್ಯ ಚಟುವಟಿಕೆಗಳು.

---